

# ಮನಸೆಳೆವ ಯಕ್ಷಗಾನ ಗೊಂಬೆಗಳ ಚಿತ್ತಾರ

**ಪೌರಾಣಿಕ ಮತ್ತು ವಿಭಿನ್ನ ಕಲಾ ಪ್ರಸಂಗಗಳ ಕಿರೀಟಗಳನ್ನು ಗೊಂಬೆಗಳ ಮೂಲಕ ತಮ್ಮ ಕೈಚಳಕದಲ್ಲಿ ಬಿಂಬಿಸಿದವರು ಕಲಾವಿದರಾದ ಕೃಷ್ಣಮೂರ್ತಿ ಉಪ್ಪೂರ.**

**★ ಬಳಕೂರು ವಿ.ಎಸ್.ನಾಯಕ**

ಯಕ್ಷಗಾನದಲ್ಲಿ ರಂಗಸಜ್ಜಿಕೆಯ ಬೆರಗು, ಹಿಮ್ಮೇಳದಲ್ಲಿ ಭಾಗವತರು, ಮೃದಂಗ, ಚಂಡೆಯ ಸದ್ದು, ಗೊಂಬೆಯ ಅಂದ, ಮುಖವರ್ಣಿಕೆಯ ಮೆರಗು ಇವೆಲ್ಲವೂ ಯಕ್ಷಗಾನ ಕಲೆಯ ಶ್ರೀಮಂತಿಕೆ ಮತ್ತು ಜೀವಂತಿಕೆಗೆ ಸಾಕ್ಷಿ. ಕರಾವಳಿ ತೀರ ಯಕ್ಷಗಾನಕ್ಕೆ ಹೆಸರುವಾಸಿ. ಉತ್ತರ ಕನ್ನಡ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಯಕ್ಷಗಾನ ತನ್ನದೇ ಆದ ವಿನೂತನ ಛಾಪನ್ನು ಮೂಡಿಸಿದೆ. ಇವರ ವೇಷಭೂಷಣಗಳು ಕಿರೀಟ ಇವೆಲ್ಲವೂ ನೋಡುಗರನ್ನು ಆಕರ್ಷಿಸುತ್ತದೆ. ಯಕ್ಷಗಾನದಲ್ಲಿ ವಿವಿಧ ರೀತಿಯಲ್ಲಿ ಕಿರೀಟಗಳನ್ನು ಧರಿಸಿರುವುದನ್ನು ಗಮನಿಸಿರಬಹುದು. ಅಂದರೆ ಅದರ ಆಕಾರ, ಬಣ್ಣ, ವಿಭಿನ್ನ ಶೈಲಿ ಮಾತ್ರ ಅವರ್ಣನೀಯ. ಈ ಎಲ್ಲಾ ಪೌರಾಣಿಕ ಮತ್ತು ವಿಭಿನ್ನ ಕಲಾ ಪ್ರಸಂಗಗಳ ಕಿರೀಟಗಳನ್ನು ಗೊಂಬೆಗಳ ಮೂಲಕ ತಮ್ಮ ಕೈಚಳಕದಲ್ಲಿ ಬಿಂಬಿಸಿದವರು ಕಲಾವಿದರಾದ ಕೃಷ್ಣಮೂರ್ತಿ ಉಪ್ಪೂರ.

ಇವರು ಮೂಲತಃ ಉಡುಪಿ ಜಿಲ್ಲೆ, ಕುಂದಾಪುರದ ಹಾಲಾಡಿಯ ಚೇರಿಕೆ ಗ್ರಾಮದವರು. ಪ್ರಸಿದ್ಧ ಯಕ್ಷಗಾನ ಭಾಗವತರಾದ ದಿವಂಗತ ನಾರಾಯಣ ಉಪ್ಪೂರರವರ ಸುಪುತ್ರ. ಇವರು ಯಕ್ಷಗಾನದ ಹಿನ್ನೆಲೆಯಲ್ಲಿ ಬಂದವರಾದ್ದರಿಂದ ಇದರ ಬಗ್ಗೆ ಅಪಾರವಾದ ಒಲವನ್ನು ಹೊಂದಿದ್ದರು. ಇವರು ಮೊದಲು ಗುರುಕುಲ ಪದ್ಧತಿಯಲ್ಲಿ ಹೆಚ್.ಆರ್.ಶೇಷಾದ್ರಿಯವರ ಬಳಿ ಚಿತ್ರಕಲೆಯನ್ನು ಅಧ್ಯಯನ ಮಾಡಿದವರು.

## ಗೊಂಬೆಗಳ ತಯಾರಿಕೆ

ಯಕ್ಷಗಾನದ ಮುಖವರ್ಣಿಕೆಗಳನ್ನು ತಯಾರಿಸುವುದು ಸುಲಭದ ಮಾತಲ್ಲ. ಮೊದಲು ಪ್ಲಾಸ್ಟರ್ ಆಫ್ ಪ್ಯಾರಿಸ್‌ನಲ್ಲಿ ಅಚ್ಚು ಹಾಕಿ ನಂತರ ಅದರಿಂದ ಬೇಕಾದ ಆಕೃತಿಗಳನ್ನು ಮಾಡಿಕೊಂಡು ಎನಾಮಲ್ ಪೈಂಟ್ ಅನ್ನು ಬಳಸಿ ತಮ್ಮದೇ ಆದ ಶೈಲಿಯಲ್ಲಿ ರಚಿಸುತ್ತಾರೆ. ಈ ಮೊದಲು ಮುಖವರ್ಣಿಕೆಗಳನ್ನು ತಯಾರಿಸುವಾಗ ಮೂಲ ಗೊಂಬೆಯನ್ನು ಕೆತ್ತಿ ಅದರ ಅಚ್ಚನ್ನು ತೆಗೆದು ಗೊಂಬೆಯನ್ನು ತಯಾರಿಸಬೇಕಿತ್ತು. ಆದ ಕಾರಣ ಇದನ್ನು ತಯಾರಿಸುವಾಗ ಅದರದೇ ಆದ ವಿಧಾನವನ್ನು ಮಾಡಬೇಕು. ವೇಷಧಾರಿಗಳಲ್ಲಿ ರಾಜವೇಷ, ಕಿರಾತವೇಷ, ಕೃಷ್ಣ, ಕರ್ಣ, ಕೀಚಕ, ಅರ್ಜುನ,



ಕಲಾವಿದ ಕೃಷ್ಣಮೂರ್ತಿ ಉಪ್ಪೂರ

ಸುಧನ್ವ, ರಾಕ್ಷಸ ಹೀಗೆ ಬೇರೆ ಬೇರೆ ರೀತಿಯ ಮುಖವರ್ಣಿಕೆಗಳನ್ನು ಅದರದೇ ಆದ ರೀತಿಯಲ್ಲಿ ರಚನೆ ಮಾಡಬೇಕು. ಅದರ ವಿನ್ಯಾಸ ಬೇರೆ ಬೇರೆ ರೀತಿಯಾಗಿ ಇರುತ್ತದೆ. ಒಂದಕ್ಕಿಂತ ಒಂದು ಗೊಂಬೆಗಳು ವಿಭಿನ್ನವಾಗಿದ್ದು, ಆ ಪಾತ್ರಕ್ಕೆ ಹೊಂದಾಣಿಕೆಯಾಗುವಂತೆ ರಚಿಸಬೇಕಾಗುತ್ತದೆ. ಆದ್ದರಿಂದ ಯಕ್ಷಗಾನಕ್ಕೆ ತನ್ನದೇ ಆದ ಪಾರಂಪರಿಕ ವಿನ್ಯಾಸವಿದ್ದು, ಕಲಾಸಕ್ತರು ಮೆಚ್ಚುವ ರೀತಿಯಲ್ಲಿ ಒಂದಕ್ಕಿಂದ ಒಂದು ವಿಭಿನ್ನ ಮುಖವರ್ಣಿಕೆಗಳನ್ನು ರಚಿಸಿರುವುದು ವಿಶೇಷ.

ತಮ್ಮ ಅನುಭವ, ಸಾಧನೆ, ಕಲೆಯಲ್ಲಿನ ಆಸಕ್ತಿ, ಚಾಕಚಕ್ಯತೆ ಮೇಲಾಗಿ ಸೃಜನಶೀಲ ಗುಣ ಇವರನ್ನು ಈ ಪಾರಂಪರಿಕ ಕಲೆಯಲ್ಲಿ ಪಳಗಿಸಿದೆ. ನೂರಾರು ಯಕ್ಷಗಾನ ಪ್ರಿಯರ ಮನದಲ್ಲಿ ಅಚ್ಚಳಿಯದ ಛಾಪು ಮೂಡಿಸುವ ಇವರ ಕಲೆಗಾರಿಕೆ ಅನನ್ಯ.

(ಕಲಾವಿದರ ಮೊಬೈಲ್: 9449545170)